# ನಕ್ಕುಬಿಡಿ






ಪತಿ: ಈ ತಿಂಗಳ ಖರ್ಚು ತುಂಬಾ ಹೆಚ್ಚಾಗಿದೆ. ಅಷ್ಟೊಂದು ಹಣ ಎಲ್ಲಿ ಖರ್ಚು ಮಾಡಿದೆ?

ಪತ್ನಿ: ಎಲ್ಲಾ ಖರ್ಚುಗಳನ್ನು ನಾನು ಡೈರಿಯಲ್ಲಿ ಬರೆದಿಟ್ಟಿದ್ದೇನೆ. ನೀವದನ್ನು ನೋಡಬಹುದು.

ಪತಿ: ಸರಿ, ತೋರಿಸು.

ಪತ್ನಿ ನೀಡಿದ ಡೈರಿಯ ಪುಟದಲ್ಲಿ ಹೀಗೆ ಬರೆಯಲಾಗಿತ್ತು: 1500 ರೂಪಾಯಿ ಹಾಲು, 4000 ರೂ. ತರಕಾರಿ, 800 ರೂಪಾಯಿ ಎಹೋಗೊ, 1800 ರೂ. ಲಾಂಡ್ರಿ ಬಿಲ್, 500 ರೂಪಾಯಿ ಎಹೋಗೊ, 3000 ರೂ. ಮನೆಗೆಲಸದಾಕೆಗೆ, 6000 ರೂಪಾಯಿ ದಿನಸಿ ಅಂಗಡಿ ಬಿಲ್, 1000 ರೂ. ಎಹೋಗೊ, 1800 ವಿದ್ಯುತ್ ಮತ್ತು ನೀರಿನ ಬಿಲ್, 750 ರೂಪಾಯಿ ಎಹೋಗೊ....

ಪತಿ: ಎಲ್ಲಾ ಸರಿ, ಆದರೆ ಈ 'ಎಹೋಗೊ' ಎಂದರೇನು?

ಪತ್ನಿ: ಎಲ್ಲಿಗೆ ಹೋಯಿತೋ ಗೊತ್ತಿಲ್ಲ..!

***

ಸಂದರ್ಶಕನೋರ್ವ 99ರ ಹರೆಯದ ವಯೋವೃದ್ಧರ ಸಂದರ್ಶನದಲ್ಲಿ ತೊಡಗಿದ್ದ...

ಸಂದರ್ಶಕ: ಅಭಿನಂದನೆಗಳು ತಮಗೆ; ಮುಂದಿನ ವರ್ಷ ಖಂಡಿತವಾಗಿಯೂ ನಿಮ್ಮ ನೂರನೇ ಹುಟ್ಟು ಹಬ್ಬಕ್ಕೆ ನಿಮ್ಮನ್ನು ಪುನಃ ಭೇಟಿ ಮಾಡುವ ಅವಕಾಶ ದೊರಕಬಹುದೆಂದು ಭಾವಿಸುತ್ತೇನೆ.

ವೃದ್ಧ: ಓಹೋ, ನಿಶ್ಚಯವಾಗಿಯೂ... ಏಕಾಗಬಾರದು? ನಿನಗಿನ್ನೂ ಚಿಕ್ಕ ಪ್ರಾಯ, ಮಾತ್ರವಲ್ಲದೆ ನೀನು ಆರೋಗ್ಯವಂತನೂ ಸದೃಢನೂ ಆಗಿರುವಂತೆ ಕಾಣಿಸುತ್ತಿರುವೆ!

***

ಈ ಬಾರಿ ವಟ ಸಾವಿತ್ರಿ ವ್ರತದ ಸಮಯ ಗುಂಡನಿಗೆ ಹೀಗೊಂದು ವಾಟ್ಸಪ್ ಸಂದೇಶ ಬಂತು...

ಕಾರು ಚಲಾಯಿಸುವಾಗ ಸೀಟ್ ಬೆಲ್ಟ್ ಮತ್ತು ಬೈಕ್ ಚಲಾಯಿಸುವಾಗ ಹೆಲ್ಮೆಟ್ ಧರಿಸಿಕೊಳ್ಳಬೇಕು.

ಹಾಗೆಯೇ ಮನೆಯಿಂದ ಹೊರಬೀಳುವಾಗ ತಪ್ಪದೆ ಮುಖ ಗವುಸು ಧರಿಸಬೇಕು ಮತ್ತು ಸ್ಯಾನಿಟೈಸರ್ ಬಳಸಬೇಕು; ಅದು ಬಿಟ್ಟು ಕೇವಲ ವಟ ಸಾವಿತ್ರಿ ವ್ರತದ ಭರವಸೆಯ ಮೇಲೆ ಹೊರ ಹೋಗಬೇಡ.

***

ಟೀಚರ್: ಇಂದಿನ ಆನ್ ಲೈನ್ ತರಗತಿ ಮುಕ್ತಾಯವಾಯಿತು. ನಿಮಗೇನಾದರೂ ಪ್ರಶ್ನೆಗಳಿದ್ದರೆ ಕೇಳಬಹುದು.

ಕಿಲಾಡಿ ಗುಂಡ: ನಡುವಿನ ವಿರಾಮದಲ್ಲಿ ನಿಮಗೆ ಚಹಾ ನೀಡಲು ಬಂದರಲ್ಲಾ ಟೀಚರ್, ಅವರು ನಿಮ್ಮ ಪತಿರಾಯರೇ..?

***

ಮರಿಗುಂಡ: ನಿಮ್ಮ ಬಾಲ್ಯದಲ್ಲಿ ಈ 4ಜಿ, 5ಜಿ ನೆಟ್ ವರ್ಕ್ ಗಳಿಲ್ಲದೆ ನೀವು ಹೇಗಿದ್ದಿರಿ ಅಪ್ಪ?

ಗುಂಡ: ನಮ್ಮ ಕಾಲದಲ್ಲಿ ಕೇವಲ 3ಜಿ ಇತ್ತು ಕಣೋ... ಅಮ್ಮಾಜಿ, ಅಪ್ಪಾಜಿ ಮತ್ತು ಗುರೂಜಿ. ಅವರಿಂದ ಬೀಳುತ್ತಿದ್ದ ಒಂದೊಂದು ಕಪಾಳಮೋಕ್ಷದಿಂದಲೂ ನಮ್ಮ ನೆಟ್ ವರ್ಕ್ ಗಳೆಲ್ಲಾ ತನ್ನಿಂತಾನೇ ಆರಂಭವಾಗುತ್ತಿದ್ದವು!

***

ಆನ್ ಲೈನ್ ನಲ್ಲಿ ಕಲಿತು ಉತ್ತೀರ್ಣರಾದ ಡಾಕ್ಟರ್ ಗುಂಡಣ್ಣನವರು, ರೋಗಿ ಗೋಪಿಯ ಎಕ್ಸ್ ರೇ ಪರಿಶೀಲಿಸಿದ ನಂತರ ತಮ್ಮ ಚಿಕಿತ್ಸಾ ಕೌಶಲ್ಯ ಮೆರೆಯುತ್ತಾ ಆತನಿಗೆ ತೋರಿಸಿ ಹೇಳುತ್ತಾರೆ, 'ನೋಡಿ ಮಿಸ್ಟರ್ ಗೋಪಿ, ಎಕ್ಸ್ ರೇ ಪ್ರಕಾರ ನಿಮ್ಮ ಪಕ್ಕೆಲುಬು ಮುರಿದಿದೆ; ಆದರೆ ನೀವೇನೂ ಯೋಚಿಸಬೇಡಿ. ನಾನು ಅದನ್ನು ಫೋಟೋಶಾಪ್ ಬಳಸಿ ಸರಿ ಪಡಿಸಿದ್ದೇನೆ..!

***

ಗಣೇಶೋತ್ಸವದ ಸಂದರ್ಭ ಗಣಪತಿಗೆ ನಮಸ್ಕರಿಸುತ್ತಾ ಆಶು ಕವಿ ಗುಂಡ ಸ್ವಗತದಲ್ಲಿ ಅಂದುಕೊಂಡ; 'ಗಣಪತಿಗೆ ಇಬ್ಬರು ಹೆಂಡತಿಯರು... ರಿದ್ಧಿ ಮತ್ತು ಸಿದ್ಧಿ. ನಾವ್ಹೋ ಸಾಮಾನ್ಯ ಮಾನವರು, ನಮಗಿರುವುದು ಒಬ್ಬಳೇ ಹೆಂಡತಿ; ಅವಳೂ ಜಿದ್ದಿ!

***

ಮರಿ ಗುಂಡ: ಅಮ್ಮಾ, ಈಗ ನಾವು ಮಾಸ್ಕ್ ಧರಿಸಿ ಹೊರ ಹೊರಟರೆ ಸಾಕು, ಬೀದಿ ನಾಯಿಗಳು ನಮ್ಮನ್ನು ಹಿಂಬಾಲಿಸಿ ವಿಚಿತ್ರವಾಗಿ ನೋಡುತ್ತಿರುತ್ತವೆ; ಅದೇಕಮ್ಮಾ?

ಶ್ರೀಮತಿ ಗುಂಡ: ಮಾಸ್ಕ್ ಧರಿಸಿರುವ ನಮ್ಮ ಮುಖ ನೋಡಿ, ಈ ಮನುಷ್ಯರ ಮೂತಿಯೇಕೆ ನಮ್ಮಂತೆಯೇ ಕಾಣಿಸುತ್ತದೆಯೆಂಬ ಆಶ್ಚರ್ಯ ಅವುಗಳಿಗೆ ಕಣೋ!

***

ವಿವಾಹಾನಂತರ ಸ್ತ್ರೀ ತನ್ನ ಮನೆ, ಹೆತ್ತವರು ಮತ್ತು ಸಂಬಂಧಿಕರೆಲ್ಲರನ್ನೂ ಬಿಟ್ಟು ಅಪರಿಚಿತ ಮನೆಗೆ ಏಕಾಏಕಿ ಆಗಮಿಸುತ್ತಾಳೆಯೆನ್ನುವುದು ಮಹತ್ವದ ವಿಷಯವೇ ಆಗಿದೆ.

ಆದರೆ ಅಂಥಾ ಅಪರಿಚಿತ ಸ್ತ್ರೀಯ ಕೈಯಲ್ಲಿ ತನ್ನ ಮನೆ, ಸಂಪತ್ತು ಮತ್ತು ಸ್ವಾತಂತ್ರ್ಯ ನೀಡುವ ಪುರುಷರ ಮಹಾನ್ ವ್ಯಕ್ತಿತ್ವ ಸಮಾಜದ ಕಣ್ಣಿಗೆ ಅದೇಕೆ ಕಾಣಿಸುತ್ತಿಲ್ಲವೆನ್ನುವುದೇ ಪತ್ನೀ ಪೀಡಿತ ಗುಂಡನ ವಾದಯುತ ಪ್ರಶ್ನೆಯಾಗಿದೆ!

—ರಮಣ್ ಶೆಟ್ಟಿ ರೆಂಜಾಳ್,
ಮುಂಬಯಿ


